# District Health & Family Welfare Office,
Udupi District, Udupi - 576101 Phone: 2525566/2536650
Email Id: dhoudupi-hfws@karnataka.gov.in / dhoudupi@gmail.com


**No: DHO/CMD/HS/ 301 /2019-20** **Date: 27.01.2020**

**APPENDIX- VIII**

## PROFORMA REGARDING SAFE DRINKING WATER AND SANITARY CONDITION CERTIFICATE

It is certified that an inspection team headed by DR. SUDHIRCHANDRA SOODA, DISTRICT HEALTH AND FAMILY WELFARE OFFICER, UDUPI (Name of Officers with designation) from DISTRICT HEALTH AND FAMILY WELFARE OFFICE, UDUPI DISTRICT (Name of Department/Office) inspected the DON BOSCO ENGLISH MEDIUM SCHOOL SHIRVA-574116, UDUPI DISTRICT (Name address of the school) on 23.01.2020 and found that the DON BOSCO ENGLISH MEDIUM SCHOOL (Name of the school) has safe drinking water facilities for the students and members of staff of the institution and is maintaining the hygienic sanitation condition in the school building & the campus as per the norms prescribed by the Central/ State / U.T. Govt.

The above valid for a period of **One Year from the issuing date.**

Signature with Seal: Dist. Health & F.W. Officer Udupi

Name : DR. SUDHIRCHANDRA SOODA
Designation: DISTRICT HEALTH AND FAMILY WELFARE OFFICER, UDUPI DISTRICT, UDUPI.

To,
PRINCIPAL
DON BOSCO ENGLISH MEDIUM SCHOOL
SHIRVA, UDUPI DISTRICT- 574116
(Name & address of the Institution)

# ಸ್ಥಳ ಪರಿಶೀಲನಾ ವರದಿ

DON BOSCO ENGLISH MEDIUM SCHOOL, ಶಿರ್ವ, ಉಡುಪಿ ಜಿಲ್ಲೆ, ಇವರು ತಮ್ಮ ಪತ್ರ ದಿನಾಂಕ 23.01.2020ರಂತೆ CBSC Affiliationಗಾಗಿ, ನಮ್ಮ ಇಲಾಖೆಯಿಂದ ಆರೋಗ್ಯ ಮತ್ತು ನೈರ್ಮಲ್ಯ ಕುರಿತು ಧೃಡೀಕರಣವನ್ನು ಕೇಳಿರುತ್ತಾರೆ. ಆದ್ದರಿಂದ ದಿನಾಂಕ 23.01.2020 ರಂದು ಪೂರ್ವಾಹ್ನ ಶಾಲೆಗೆ ಭೇಟಿ ನೀಡಿ ಈ ಕೆಳಗಿನ ಅಂಶಗಳನ್ನು ಪರಿಶೀಲಿಸಲಾಗಿದೆ.

1. ಶಾಲೆಯು ಶಿರ್ವದಿಂದ ಶಂಕರಪುರದ ಮೂಲಕ ಉಡುಪಿಗೆ ಬರುವ ರಸ್ತೆಯ ಎಡಭಾಗದಲ್ಲಿ ರಸ್ತೆಯಿಂದ ಸಾಕಷ್ಟು ಒಳಗೆ ಉತ್ತಮವಾದ ಮತ್ತು ಸುರಕ್ಷಿತವಾದ ಆವರಣದಲ್ಲಿದ್ದು, ಸ್ವಚ್ಛ ಹಾಗೂ ಹಿತಕರ ವಾತಾವರಣವನ್ನು ಹೊಂದಿದೆ. ಶಾಲೆಯು ಸುಸಜ್ಜಿತವಾದ ವಿಶಾಲವಾದ ಕಟ್ಟಡವನ್ನು ಹೊಂದಿದೆ.
2. ಶಾಲೆಯಲ್ಲಿ LKG ಯಿಂದ 10ನೇ ತರಗತಿ ತನಕ ತರಗತಿಗಳು ನಡೆಯುತ್ತಿವೆ. ಒಟ್ಟು 983 ವಿದ್ಯಾರ್ಥಿಗಳು ಇರುತ್ತಾರೆ.
3. ಕುಡಿಯಲು ತೆರೆದ ಬಾವಿಯ ನೀರನ್ನು over head ಟ್ಯಾಂಕಿಗೆ ಪಂಪು ಮಾಡಿ ಅಲ್ಲಿಂದ ಅಕ್ವಾಗಾರ್ಡ್ ಮೂಲಕ ಒದಗಿಸಲಾಗಿದೆ.
4. ಶಾಲೆಯಲ್ಲಿ ಒಂದು ಕ್ಯಾಂಟೀನ್ ನಡೆಯುತ್ತಿದ್ದು ಕ್ಯಾಂಟೀನ್ ಸ್ವಚ್ಛ ಹಾಗೂ ನೈರ್ಮಲ್ಯಯುತವಾಗಿದೆ.
5. ಕ್ಲಾಸ್ ರೂಮುಗಳು ವಿಶಾಲವಾಗಿದ್ದು, ಸಾಕಷ್ಟು ಕಿಟಕಿ ಬಾಗಿಲುಗಳನ್ನು ಸರಿಯಾದ ರೀತಿಯಲ್ಲಿ ಅಳವಡಿಸಲಾಗಿದೆ. ಕ್ಲಾಸ್‌ನ ಹೊರಭಾಗದಲ್ಲಿ ಸಾಕಷ್ಟು ತೆರೆದ ಜಾಗವಿದ್ದು, ಗಾಳಿ ಬೆಳಕು ಸಾಕಷ್ಟು ಇದೆ.
6. ಪ್ರತಿ ಅಂತಸ್ತಿನಲ್ಲೂ ಹುಡುಗರು ಮತ್ತು ಹುಡುಗಿಯರಿಗೆ ಪ್ರತ್ಯೇಕವಾಗಿ ಮೂತ್ರಿಗಳು, ಕಕ್ಕಸುಗಳು ಮತ್ತು ಕೈ ತೊಳೆಯುವ ವ್ಯವಸ್ಥೆಯನ್ನು ಹೊಂದಿರುವ ನೈರ್ಮಲ್ಯಯುತವಾದ ಶೌಚಾಲಯ ವ್ಯವಸ್ಥೆಗಳು ಇವೆ. ನಳ್ಳಿ ಜೋಡಣೆಯೊಂದಿಗೆ ದಾರಾಳ ನೀರಿನ ವ್ಯವಸ್ಥೆಯನ್ನು ಒದಗಿಸಲಾಗಿದೆ.
7. ಶಾಲೆಯ ಎದುರಿನಲ್ಲಿ 2 ಆಟದ ಮೈದಾನಗಳು ಇದ್ದು, ದೈಹಿಕ ವ್ಯಾಯಾಮ ಮತ್ತು ಆಟೋಟ ತರಬೇತಿಯನ್ನು ದೈಹಿಕ ಶಿಕ್ಷಣ ಶಿಕ್ಷಕರಿಂದ ನೀಡಲಾಗುತ್ತಿದೆ.
8. ಪ್ರಾಥಮಿಕ ಆರೋಗ್ಯ ಕೇಂದ್ರ ಶಿರ್ವದ ವೈದ್ಯಾಧಿಕಾರಿಯವರಿಂದ ನಿಗದಿತವಾಗಿ ವೈದ್ಯಕೀಯ ತಪಾಸಣೆ ಮಾಡಲಾಗುತ್ತಿದೆ ಮತ್ತು ಆರೋಗ್ಯ ಶಿಕ್ಷಣ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.
9. ಶಾಲೆಯಲ್ಲಿ ಪ್ರತಿದಿನ ವಿದ್ಯಾರ್ಥಿಗಳ ಅಸೆಂಬ್ಲಿ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ಆರೋಗ್ಯ ಮತ್ತು ವೈಯಕ್ತಿಕ ಶುಚಿತ್ವದ ಕುರಿತು ದೈಹಿಕ ಶಿಕ್ಷಣ ಶಿಕ್ಷಕರು ಪರಿಶೀಲನೆ ನಡೆಸಿ ಮಾರ್ಗದರ್ಶನ ನೀಡುತ್ತಾರೆಂದು ತಿಳಿದುಬಂದಿದೆ.
10. ಶಾಲೆಯಲ್ಲಿ ಪ್ರಥಮಚಿಕಿತ್ಸೆ ಪೆಟ್ಟಿಗೆ ವ್ಯವಸ್ಥೆ ಮಾಡಲಾಗಿದೆ. ಈ ವಿಭಾಗಕ್ಕಾಗಿ ಒಂದು ಪ್ರತ್ಯೇಕ ಕೋಣೆಯಿದ್ದು ಅಲ್ಲಿ ಒಬ್ಬ ಆಪ್ತಸಮಾಲೋಚಕರನ್ನು ನೇಮಕ ಮಾಡಿಕೊಂಡಿರುವುದಾಗಿ ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಮೈರ್ಟ್ಲೀ ಎಲ್. ಎಫ್. ಲುವಿಸ್‌ರವರು ತಿಳಿಸಿರುತ್ತಾರೆ.
11. ಶಾಲಾ ಶಿಸ್ತು ಮತ್ತು ವಿದ್ಯಾರ್ಥಿಗಳ ಆರೋಗ್ಯದ ವಿಷಯದಲ್ಲಿ ಪ್ರಾಂಶುಪಾಲರು ಮತ್ತು ದೈಹಿಕ ಶಿಕ್ಷಕರು ಜವಾಬ್ದಾರಿ ನಿರ್ವಹಿಸುತ್ತಾರೆ.
12. ಶಾಲಾ ಆವರಣದೊಳಗೆ ಅನಾಪೇಕ್ಷಿತ ವ್ಯಕ್ತಿಗಳಿಗೆ, ತಿಂಡಿ– ತಿನಸುಗಳ ಮಾರಾಟಗಾರರಿಗೆ ಮತ್ತು ಅನಗತ್ಯವಾದ ವಾಹನಗಳ ಪ್ರವೇಶಕ್ಕೆ ನಿರ್ಬಂಧವಿದ್ದು, ಭದ್ರತೆ ಚೆನ್ನಾಗಿದೆ.
13. ಶಾಲೆಯ ತೆರೆದ ಬಾವಿಯಿಂದ ಮತ್ತು ಅಕ್ವಾಗಾರ್ಡ್‌ನಿಂದ ನೀರಿನ ಮಾದರಿಗಳನ್ನು ಸಂಗ್ರಹಿಸಿ, ಜಿಲ್ಲಾ ಪ್ರಯೋಗಾಲಯದಲ್ಲಿ ಪರೀಕ್ಷೆಗೊಳಪಡಿಸಲಾಗಿದ್ದು, ನೀರು ಕುಡಿಯಲು ಯೋಗ್ಯವಾಗಿದೆ ಎಂದು ಪ್ರಮಾಣೀಕರಿಸಲಾಗಿದೆ. ನೀರಿನ ಮಾದರಿಯ ಪರೀಕ್ಷಾ ವರದಿಯನ್ನು ಲಗತ್ತಿಸಲಾಗಿದೆ.

ಸ್ಥಳ: ಉಡುಪಿ.
ದಿನಾಂಕ: 24.01.2020

Dist. Health & F.W. Officer
Udupi

ಆರೋಗ್ಯ ಮೇಲ್ವಿಚಾರಕರು,
ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಯವರ ಕಛೇರಿ,
ಉಡುಪಿ ಜಿಲ್ಲೆ, ಉಡುಪಿ.